ಇದಾದ ನಂತರ ದಿನಾಂಕ: 12-9-2000 ರಲ್ಲಿ ಸರ್ಕಾರವು ಸಂಬಂಧಪಟ್ಟವರಿಗೆ ಆದೇಶ ನೀಡಿ ಸದರಿ ಹೋಟೆಲ್ ಮೈಸೂರಿನ ಕೇಂದ್ರ ಸ್ಥಾನದಲ್ಲಿದ್ದು ಸರ್ಕಾರದ ಬೆಲೆ ಬಾಳುವ ಸ್ವತ್ತಾಗಿರುವುದರಿಂದ ಇದರ ರಕ್ಷಣೆಗಾಗಿ ಸಿಬ್ಬಂದಿಯನ್ನು ನೇಮಿಸಿರುವುದರಿಂದ ಉಂಟಾಗುವ ನಷ್ಟವನ್ನು ತಡೆಗಟ್ಟುವ ಉದ್ದೇಶದಿಂದ ಸದರಿ ಹೋಟೆಲನ್ನು ಕೂಡಲೇ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲು ನಿರ್ಧರಿಸಲಾಗಿರುವುದರಿಂದ ದಿನಾಂಕ: 25-8-2000ರಂದು ಕರೆಯಲಾಗಿದ್ದ ಟೆಂಡರ್ ಪ್ರಕಟಣೆಯನ್ನು ಹಿಂಪಡೆದು ಸರ್ಕಾರವು ಸದರಿ ಹೋಟೆಲನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ದಿ: 6-10-2000 ರಂದು ಹಸ್ತಾಂತರಿಸಿದೆ.

ಇ) ಮೆಟ್ರೋಪೋಲ್ ಹೋಟೆಲ್‌ನ ಕಟ್ಟಡವನ್ನು ಲಾಭದಾಯಕವಾಗಿ ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆಗೆ ವಹಿಸಲಾಗಿದ್ದು ಸದರಿ ಕಟ್ಟಡವನ್ನು ಖಾಸಗಿಯವರಿಗೆ ಹೋಟೆಲ್ ನಡೆಸಲು ಗುತ್ತಿಗೆ ಆಧಾರದಲ್ಲಿ ನಡೆಸಲು ಪ್ರವಾಸೋದ್ಯಮ ಇಲಾಖೆಯು ಕ್ರಮ ತೆಗೆದುಕೊಂಡಿರುತ್ತದೆ.

ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕುಂಠಿತಗೊಂಡಿರುವುದು.

2273(2735) ಶ್ರೀ ಎಸ್. ಶಿವಣ್ಣ (ತುಮಕೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು- ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಹಣದ ಕೊರತೆಯಿಂದ ಕುಂಠಿತಗೊಂಡಿರುವುದು ನಿಜವೇ?

ಆ) ಈ ರಾಷ್ಟ್ರೀಯ ಹೆದ್ದಾರಿಯನ್ನು ಸರ್ಕಾರ ಘೋಷಿಸಿದ್ದು ಯಾವಾಗ? ಈ ರಸ್ತೆಯ ಉದ್ದವೆಷ್ಟು? ಕಾಮಗಾರಿ ಮೊತ್ತವೆಷ್ಟು? ಈಗಾಗಲೇ ಕೆಲಸ ಎಷ್ಟು ಸಾಗಿದೆ? ಪೂರ್ಣಗೊಳಿಸಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ?

ಇ) ಇದಕ್ಕೆ ಪೂರಕವಾಗಿ ರಸ್ತೆ ಪರಿವರ್ತನಾ ಕಾರ್ಯ ಆರಂಭವಾಗಿದೆಯೇ? ಎಷ್ಟು ಕಿಲೋಮೀಟರ್ ರಸ್ತೆ ಕೆಲಸ ಪೂರ್ಣಗೊಂಡಿರುತ್ತದೆ (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಇಲ್ಲ.

ಆ) ತುಮಕೂರು-ಹೊನ್ನಾವರ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ-206ಎಂಬುದಾಗಿ ದಿನಾಂಕ: 6-1-99 ರಲ್ಲಿ ಕೇಂದ್ರ ಸರ್ಕಾರ ಘೋಷಿಸಿರುತ್ತದೆ. ಈ ಹೆದ್ದಾರಿಯ ಒಟ್ಟು ಉದ್ದ 365 ಕಿ.ಮೀ. ಇರುತ್ತದೆ.

1) 1999-2000ನೇ ಸಾಲಿನಲ್ಲಿ ಈ ರಾಷ್ಟ್ರೀಯ ಹೆದ್ದಾರಿಯ ಆಯ್ದ 111 ಕಿ.ಮೀ.ಗಳ ವಾಹನ ಸಂಚಾರ ಪಥದ ಅಭಿವೃದ್ಧಿಗೆ ರೂ. 1040 ಲಕ್ಷಗಳ ಅಂದಾಜು ಮಂಜೂರಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ.

2) 2000-01ನೇ ಸಾಲಿನಲ್ಲಿ ಅಯ್ದ 112.70 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯ ವಾಹನ ಸಂಚಾರ ಪಥದ ಅಭಿವೃದ್ಧಿಗೆ ರೂ. 1242 ಲಕ್ಷಗಳಿಗೆ ಅಂದಾಜು ಮಂಜೂರಾಗಿದ್ದು, ತುಮಕೂರು ಉಪ ವಿಭಾಗದ ವ್ಯಾಪ್ತಿಯಲ್ಲಿನ 8.00 ಕಿ.ಮೀ. (83-91) ಕಾಮಗಾರಿ ಮಾತ್ರ ಬಾಕಿ ಇರುತ್ತದೆ. ಉಳಿದ ಎಲ್ಲಾ ಕಾಮಗಾರಿಗಳನ್ನು ನಿಗಧಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗಿದೆ.

3) 2001-02ನೇ ಸಾಲಿನಲ್ಲಿ ಇದುವರೆಗೆ 26.ಕಿ.ಮೀ. ವಾಹನ ಸಂಚಾರ ಪಥದ ಅಭಿವೃದ್ಧಿಗೆ ರೂ. 519.54 ಲಕ್ಷಗಳ ಅಂದಾಜು ಮಂಜೂರಾಗಿದ್ದು, ದಿನಾಂಕ 31-3-2002 ರೊಳಗೆ ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆ.

ಇ) ತುಮಕೂರು -ಹೊನ್ನಾವರ ಹೆದ್ದಾರಿಯ ಪರಿವರ್ತನಾ ಕಾರ್ಯಕ್ಕೆ ಅಂದರೆ ದ್ವಿಪಥಗೊಳಿಸುವ ಯಾವುದೇ ಕಾಮಗಾರಿಗಳು ಕೇಂದ್ರ ಸರ್ಕಾರದಿಂದ ಸಧ್ಯಕ್ಕೆ ಮಂಜೂರಾಗಿರುವುದಿಲ್ಲ.

ಗೌರಿಬಿದನೂರು ತಾಲ್ಲೂಕಿನಲ್ಲಿ ಒತ್ತುವರಿಯಾಗಿರುವ ಅರಣ್ಯ ಪ್ರದೇಶಗಳು.

2282 (2714) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಲ್ಲಿ ಒತ್ತುವರಿಯಾಗಿರುವ ಅರಣ್ಯ ಭೂಮಿ ವಿಸ್ತೀರ್ಣವೆಷ್ಟು? ಈ ಒತ್ತುವರಿದಾರರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮವೇನು? ಹಾಗೂ ಒತ್ತುವರಿ ಭೂಮಿಯಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು? ವಿವರ ನೀಡುವುದು.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

1. ಗೌರಿಬಿದನೂರು ತಾಲ್ಲೂಕಿನಲ್ಲಿ 38.87 ಹೆಕ್ಟೇರ್ ಅರಣ್ಯ ಭೂಮಿ ಒತ್ತುವರಿಯಾಗಿರುತ್ತದೆ.

ಒತ್ತುವರಿಯಾದ 38.87 ಹೆಕ್ಟೇರ್ ಅರಣ್ಯ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ನೆಡತೋಪುಗಳನ್ನು ಬೆಳೆಸಲಾಗಿದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಷ್ಟ್ರದಲ್ಲಿ ಗಿಡ ನೆಡುವ ಕಾರ್ಯಕ್ರಮಗಳಿಗೆ ಸರ್ಕಾರೇತರ ಸಂಸ್ಥೆಗಳಿಗೆ ಅನುದಾನ ನೀಡುವ ಬಗ್ಗೆ.

2294(3238) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.